ಇ) ಸದರಿ ಮತಕ್ಷೇತ್ರದಲ್ಲಿ 2004–05 ನೇ ಸಾಲಿನಲ್ಲಿ 10 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. (ಈ 10 ಕೊಳವೆ ಬಾವಿಗಳು 2003–04 ನೇ ಸಾಲಿನಲ್ಲಿ ಬಾಕಿ ಇದ್ದ ಗುರಿಯಲ್ಲಿ ಕೊರೆದ ಕೊಳವೆ ಬಾವಿಗಳಾಗಿರುತ್ತವೆ.)

2005–06ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

ಈ) ಸಕಲೇಶಪುರ ಮತಕ್ಷೇತ್ರದಲ್ಲಿ 2004–05 ಮತ್ತು 2005–06ನೇ ಸಾಲಿಗೆ ನಿಗದಿಪಡಿಸಿದ ಗುರಿಯಂತೆ 101 ಕೊಳವೆ ಬಾವಿಗಳು ಕೊರೆಯಲು ಬಾಕಿ ಇವೆ.

ಉ) 2003–04ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಕರೆಯಲಾಗಿದ್ದು, ಮೆ:ರಾಜ ರಾಜೇಶ್ವರಿ ಬೋರ್‌ವೆಲ್ಸ್ ಕಂಪನಿ ಇವರು ಟೆಂಡರ್‌ನಲ್ಲಿ ಪ್ರತಿ ಮೀಟರ್‌ಗೆ ರೂ.228 ದರವನ್ನು ನಮೂದಿಸಿದ್ದು, ಟೆಂಡರ್‌ನಲ್ಲಿ ಈ ಜಿಲ್ಲೆಗೆ ಸಂಬಂಧಿಸಿದಂತೆ ಅತಿ ಕಡಿಮೆ ದರ ನಮೂದಿಸಿದ ಆಧಾರದ ಮೇಲೆ ಇವರಿಗೆ ಕೊಳವೆ ಬಾವಿ ಕೊರೆಯಲು ಮಂಜೂರಾತಿ ನೀಡಲಾಗಿತ್ತು. ಆದರೆ ಸದರಿ ಡ್ರಿಲ್ಲಿಂಗ್ ಕಂಪನಿಯವರು ನಿಗಧಿತ ಅವಧಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯದೆ ಇದ್ದ ಪ್ರಯುಕ್ತ ಇವರನ್ನು ಕಪ್ಪು ಪಟ್ಟಿಗೆ ಸೇರಿಸಿ ಠೇವಣಿ ಹಣವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಮೆ: ರವಿ ಬೋರ್ ವೆಲ್ಸ್ ಕಡೂರು, ಮೆ:ಬಾಲಾಜಿ ಡ್ರಿಲ್ಲರ್ಸ್, ಬಿಜಾಪುರ ಮತ್ತು ಮೆ: ಜೇನುಕಲ್ ಬೋರ್ ವೆಲ್ಸ್ ಕಂಪನಿ ಅರಸೀಕೆರೆ ಇವರಿಗೆ ಅದೇ ದರದಲ್ಲಿ 2004–05ನೇ ಸಾಲಿನ ಡಿಸೆಂಬರ್ ಮಾಹೆಯಲ್ಲಿ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡಲಾಯಿತು. ಅದರಂತೆ ಹಾಸನ ಜಿಲ್ಲೆಯಲ್ಲಿ ಕೊಳವೆ ಬಾವಿ ಕಾರ್ಯ ನಿರ್ವಹಿಸಿದ್ದು, ಸಕಲೇಶ್ವರ ಮತಕ್ಷೇತ್ರದಲ್ಲಿ 10 ಕೊಳವೆ ಬಾವಿಗಳನ್ನು ಮಾತ್ರ ಕೊರೆದಿರುತ್ತಾರೆ. ಇತ್ತೀಚೆಗೆ ಡೀಸಲ್ ದರ ಹೆಚ್ಚಾಗಿರುವ ಕಾರಣ ಕೆಲಸ ಸ್ಥಗಿತಗೊಳಿಸಿರುತ್ತಾರೆ.

ಊ) ಟೆಂಡರ್ ದರ ಅತಿ ಕಡಿಮೆ ಇರುವುದರಿಂದ ಯಾವುದೇ ಕಂಪನಿಗಳು ಕೊಳವೆ ಬಾವಿಗಳನ್ನು ಕೊರೆಯಲು ಮುಂದೆ ಬಾರದ ಪ್ರಯುಕ್ತ 2005–06ನೇ ಸಾಲಿನಲ್ಲಿ ಹೊಸ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್ ದರ ಅಂತಿಮಗೊಂಡ ನಂತರ ಬಾಕಿ ಇರುವ ಬ್ಯಾಕ್‌ಲಾಗ್ ಗುರಿಯನ್ನು ಮತ್ತು 2005–06ನೇ ಸಾಲಿನ ಗುರಿಯನ್ನು ಸೇರಿಸಿ ಎಲ್ಲಾ ಕೊಳವೆ ಬಾವಿಗಳನ್ನು ಕೊರೆಸಲು ಕ್ರಮ ಕೈಗೊಳ್ಳಲಾಗುವುದು.

5157 (5913) ಶೀ ಯೋಗೀಶ್ ಭಟ್.ಎನ್ (ಮಂಗಳೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2004–05ರ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ವೇತನವನ್ನು ಸರ್ಕಾರವು ಪೂರ್ಣಪ್ರಮಾಣದಲ್ಲಿ ಬಿಡುಗಡೆಗೊಳಿಸಿದೆಯೇ; ಇಲ್ಲವಾದಲ್ಲಿ, ಇನ್ನೂ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಬೇಕಾಗಿದೆ ಮತ್ತು ಅದನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು;

ಆ) ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ನೆರವಾಗುವ ಸರ್ಕಾರದ ವಿದ್ಯಾರ್ಥಿ ವೇತನವನ್ನು ಸಕಾಲದಲ್ಲಿ ಬಿಡುಗಡೆಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳಿಗಾಗಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆಗೊಳಿಸಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಳಿಗಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಯೋಜನೆಗಾಗಿ ರೂ.71.68 ಕೋಟಿಗಳ ಬೇಡಿಕೆ ಇದ್ದು, ಇದರಲ್ಲಿ

ಈಗಾಗಲೇ ರೂ.60.68 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಉಳಿದ ಮೊತ್ತ ರೂ. 11.00 ಕೋಟಿ ರೂ.ಗಳಿಗೆ ಆರ್ಥಿಕ ಇಲಾಖೆಗೆ ಬೇಡಿಕೆ ಸಲ್ಲಿಸಿ, ಈ ಸಾಲಿನಲ್ಲಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ 2004–05ರ ಶೈಕ್ಷಣಿಕ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯಸರ್ಕಾರದ ಒಪ್ಪಿದ ವೆಚ್ಚವಾದ ರೂ.771.94 ಲಕ್ಷಗಳನ್ನು ಸರಿದೂಗಿಸಲು ರೂ.25.44 ಲಕ್ಷಗಳನ್ನು ಬಿಡುಗಡೆಗೊಳಿಸಬೇಕಾಗಿದೆ.

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ರೂ.239.43 ಲಕ್ಷಗಳು ಆಯವ್ಯಯ ಯೋಜನೆಯಡಿ ಅನುದಾನ ಕೊರತೆಯಾದ ಕಾರಣ ಬಾಕಿ ಉಳಿದಿರುತ್ತದೆ. ಹೆಚ್ಚುವರಿ ಅನುದಾನವನ್ನು ಆಯವ್ಯಯ ಯೋಜನೆಯಡಿ ನಿಗಧಿಪಡಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಆಯವ್ಯಯ ಯೋಜನೆಯಡಿ ಹೆಚ್ಚುವರಿ ಅನುದಾನ ನಿಗಧಿಪಡಿಸಿದ ಕೂಡಲೇ ಬಾಕಿ ಮೊತ್ತವನ್ನು ಬಿಡುಗಡೆಗೆ ಮಾಡಲಾಗುವುದು.

ಹಿಂದುಳಿದ ವರ್ಗಗಳ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕಾಗಿ 2004–05ನೇ ಸಾಲಿನಲ್ಲಿ ಒಟ್ಟು ರೂ. 598.29 ಲಕ್ಷಗಳ ಆಯವ್ಯಯವನ್ನು ನಿಗಧಿಪಡಿಸಿದ್ದು, ಈ ಪೈಕಿ ರೂ.562.55 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ. ರೂ.35.74 ಲಕ್ಷಗಳ ಆಯವ್ಯಯ ಬಿಡುಗಡೆಯಾಗಿರುವುದಿಲ್ಲ.

ಸದರಿ ಕಾರ್ಯಕ್ರಮಗಳ ನಿಯಮಗಳನ್ವಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಸರ್ಕಾರದಿಂದ ಬಿಡುಗಡೆಯಾದ ಹಾಗು ಲಭ್ಯವಿರುವ ಆಯವ್ಯಯಕ್ಕೆ ಸೀಮಿತಗೊಳಿಸಿ ಮಂಜೂರು ಮಾಡುವುದರಿಂದ, ರೂ.35.74 ಲಕ್ಷಗಳ ಆಯವ್ಯಯವನ್ನು 2004–05ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಬಿಡುಗಡೆ ಮಾಡುವ ಅವಕಾಶವಿರುವುದಿಲ್ಲ.

ಆ) ಹೌದು.

5158 (5914) ಶೀ ಯೋಗೀಶ್ ಭಟ್.ಎನ್ (ಮಂಗಳೂರು): ಮಾನ್ಯ ಸಹಕಾರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು ಡೈರಿಯಲ್ಲಿ ತಾತ್ಕಾಲಿಕ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಆಧಾರದ ಮೇಲೆ ನೌಕರರ ಸಂಖ್ಯೆ ಎಷ್ಟು? ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಆ) 1995–96ನೇ ಸಾಲಿನಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿರುತ್ತಿರುವ ಇವರಿಗೆ ಯಾವುದೇ ಸೌಲಭ್ಯಗಳನ್ನು ಒದಗಿಸದೇ ಸೇವಾ ಭದ್ರತೆಯನ್ನು ನೀಡದೆ ಅತಂಥ್ರ ಸ್ಥಿತಿಯಲ್ಲಿಯೇ ಮುಂದುವರೆಸಲು ಕಾರಣಗಳೇನು? ಸರ್ಕಾರದ ಕೆಲವು ಇಲಾಖೆಗಳಲ್ಲಿ ತಾತ್ಕಾಲಿಕ ಸೇವೆಯಲ್ಲಿದ್ದ ಸಿಬ್ಬಂದಿ ವರ್ಗದವರನ್ನು ಖಾಯಂಗೊಳಿಸಿದ ಹಿನ್ನೆಲೆಯಲ್ಲಿಯೇ ಇವರುಗಳನ್ನು ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಸಹಕಾರ ಸಚಿವರು) :

ಅ) ದಕ್ಷಿಣ ಕನ್ನಡ ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿರುವ ಮಂಗಳೂರು ಡೈರಿಯಲ್ಲಿ ಅಧಿಕೃತ ಪರವಾನಗಿ ಪಡೆದ ಕಾರ್ಮಿಕ ಗುತ್ತಿಗೆದಾರರ ಮುಖಾಂತರ ಈ ಕೆಳಕಂಡ ಕೆಲಸಗಾರರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.